ಬಸು ರಸ್ತೆ ಹಂಪು, ಹೊಂಡಗಳೆಂಬ ಭೇದವಿಲ್ಲದೆ ದಡಬಡ ಸದ್ದಿನೊಂದಿಗೆ ಕುಳಿತಿದ್ದ ನಾಲ್ವರನ್ನು ಎತ್ತಿ ಎತ್ತಿ ಹಾಕುತ್ತ ಓಡುತ್ತಿತ್ತು. ಮೊದಲೇ ಲಡ್ಕಾಸು ಬಸ್ಸು. ಈ ಡ್ರೈವರುಗಳ ಸ್ಪರ್ಧೆಯಲ್ಲಿ ನಮ್ಮ ಸೊಂಟ ಮುರಿಯದಿದ್ರೆ ಭಾಗ್ಯ ಎಂದು ಸಿಡಿಗುಡುತ್ತಲೇ ಜನ ಗಟ್ಟಿಯಾಗಿ ತಮ್ಮೆದುರಿನ ರಾಡ್ ಹಿಡಿದು ಕುಳಿತಿದ್ದರು. ಕೊನೆಯ ಸ್ಟಾಪಿನಲ್ಲಿ, ಬಸ್ಸಿನಲ್ಲಿದ್ದ ಆ ನಾಲ್ಕೈದು ಜನರನ್ನಿಳಿಸಿ ಹಿಂದಿನ ಬಸ್ಸು ಮಾರು ದೂರದಲ್ಲಿದ್ದಾಗಲೇ, ಅಲ್ಲಿಂದ ಹೊರಡಲು ಸಾಧ್ಯವಾದಾಗ ಸುರೇಶ, “ಅಯ್ಯಬ್ಬ... ಬಚಾವ್” ಎಂದು ಸಮಾಧಾನವಾಗಿ ಉಸಿರಾಡಿದ್ದು. ಕ್ಲೀನರ್ ಹಾಗೂ ಕಂಡಕ್ಟರ್ ಕೆಲಸ ಮಾಡುವ ಹುಡುಗನೂ ಸ್ವಲ್ಪ ಕೆಲಸವಿದೆಯೆಂದು ಕೊನೆಯ ಸ್ಟಾಪಿನಲ್ಲೇ ಇಳಿದಿದ್ದರಿಂದ ನೇರವಾಗಿ ಧಣಿಗಳ ಮನೆಯತ್ತ ಬಸ್ ತಿರುಗಿಸಿದ ಸುರೇಶ. ಗೇಟ್ ತೆರೆದೇ ಇತ್ತು. ಫಕೀರಿಚ್ಚ ಆಗಷ್ಟೆ ರಿಕ್ಷಾದಿಂದ ಇಳಿಯುತ್ತಿದ್ದ. ಅಂದರೆ ಧಣಿಗಳು ಡೈರಿಗೆ ಹಾಲು ಹಾಕಿ ಬಂದಾಗಿದೆ. ತಾನು ಬಸ್ಸಿನ ಕೀ ಕೊಟ್ಟು ಬೇಗ ಹೋಗಬೇಕು ಅಂದುಕೊಳ್ಳುತ್ತ ಬಸ್ಸನ್ನು ಅದರ ಕಾಯಂ ನಿಲುಗಡೆಯ ಜಾಗದತ್ತ ತಿರುಗಿಸಿದ. ಸುರೇಶ ಡ್ರೈವರ್ ಸೀಟಿನಿಂದ ಕೆಳಗೆ ಧುಮುಕಿ ಕೀ ಕೊಡಲೆಂದು ಫಕೀರಿಚ್ಚನ ಹತ್ತಿರ ಬರುವಷ್ಟರಲ್ಲಿ ಒಳಗಿನಿಂದ ಬಂದ ನೆಬಿಸುಮ್ಮ, “ಹೋಯ್. ಸುರೇಶ. ನೈಯಪ್ಪ ಮಾಡಿದ್ದೇನೆ. ತಿಂದು ಹೋಗು” ಅಂದರು. ಅವರ ಕೈಯಲ್ಲಿ ಅಪ್ಪ ತುಂಬಿದ ಬಟ್ಟಲಿತ್ತು. ಸಿಟೌಟಿಗೆ ಅಂಟಿಕೊಂಡಂತೆ ರಿಕ್ಷಾ ನಿಲ್ಲಿಸಿ, ಒಂದೊಂದೇ ಹಾಲಿನ ಕ್ಯಾನುಗಳನ್ನು ಇಳಿಸಿಡುತ್ತಿದ್ದ ಫಕೀರಿಚ್ಚ ನೆಬಿಸುಮ್ಮನ ಕೈಯಲ್ಲಿದ್ದ ಬಟ್ಟಲು ನೋಡಿ, “ನೆಬಿಸುಮ್ಮನ ನೈಯಪ್ಪ ರೆಡಿಯಾಗಿಯಾಯ್ತು! ನಂಗೆ ಡೈರಿಗೆ ಹೋಗುವಾಗಲೇ ಭಯಂಕರ ಹಸಿವಾಗಿತ್ತು ಮಾರಾಯ್ತಿ. ಹೆಬ್ಬಾರರ ಹೋಟ್ಲಿಗೆ ಹೋಗುವಾಂತಿದ್ದೆ. ಪುತ್ತಿಗೆವರೆಗೆ ಮೊಯಿಲಾರ್ ಇದ್ರು. ಸುಮ್ಮನೆ ಅವರೆದುರು ಯಾಕೆ ಅಂತ ಹಾಗೇ ಬಂದೆ” ಅಂದರು. ಅವರ ತುಟಿಯಂಚಿನಲ್ಲಿ ಕಳ್ಳ ನಗು ಇಣುಕುತ್ತಿತ್ತು. “ಅಷ್ಟಾದರೂ ತೋರಿತಲ್ಲ ಈ ಮಾಪ್ಳೆಗೆ” ಎಂದು ನೆಬಿಸುಮ್ಮ ಅರೆಕೋಪದಲ್ಲಿ ಗೊಣಗಿದರು. ಅದು ರಂಜಾನ್ ಮಾಸವಾದ್ದರಿಂದ ಉಮ್ಮನ ಕೋಪ ಸಹಜವೇ. ಆದರೆ, ಫಕೀರಿಚ್ಚ ಯಾರ ಕೋಪಕ್ಕು; ಯಾರ ತಾತ್ಸಾರಕ್ಕು ಕ್ಯಾರೇ ಅನ್ನುವವರಲ್ಲ. ನಾನು ಸಣ್ಣವನಿದ್ದಾಗ ನಂಗೆ ವರ್ಷದ ಮುಕ್ಕಾಲು ಪಾಲೂ ನೋಂಬು. ಇನ್ನು ಆಯುಸ್ಸು ಇರುವವರೆಗೂ ನಾನು ನೋಂಬು ಹಿಡಿಯದಿದ್ದರೂ ಚಿಂತಿಲ್ಲ ಅಂದುಬಿಡುತ್ತಿದ್ದರು. ತನ್ನ ಹೊಟ್ಟೆ ಸ್ವಲ್ಪ ಜಾಸ್ತಿಯೇ ಕಬಳಿಸುತ್ತದೆನ್ನುವುದು ಫಕೀರಿಚ್ಚನಿಗೂ ಗೊತ್ತು. ಟೀಕೆ ಮಾಡಿದವರ ಮುಖ ನೋಡಿ ನಕ್ಕುಬಿಡುತ್ತಿದ್ದರು. ರಂಜಾನ್ ಮಾಸದ ನೋಂಬು ತನಗೆ ಹೇಳಿದ್ದಲ್ಲ ಅನ್ನುತ್ತಿದ್ದ ಫಕೀರಿಚ್ಚ ಝಕಾತ್ ಕೊಡುವುದನ್ನು ಮಾತ್ರ ತಪ್ಪಿಸುತ್ತಿರಲಿಲ್ಲ. ಈಗಲೂ ನಗುತ್ತಲೇ ನೆಬಿಸುಮ್ಮ ತಂದಿಟ್ಟ ಬಟ್ಟಲಿನಿಂದ ಒಂದು ಅಪ್ಪ ತೆಗೆದು ಗುಳುಮ್ಮನೇ ಬಾಯಿಗೆ ಹಾಕಿದರು. ಸುರೇಶನಿಗೆ ಕುಳಿತು ತಿನ್ನುವಷ್ಟು ಸಮಯವಿರಲಿಲ್ಲ. ಹಾಗಂತ ನೈಯಪ್ಪ ಬೇಡವೆನ್ನಲು ಸಾಧ್ಯವೇ ಇಲ್ಲ.

“ಉಮ್ಮಾ, ಇದನ್ನು ಲಕೋಟೆಗೇ ಹಾಕಿಕೊಡಿ. ನಾನು ಬೇಗ ಮನೆಗೆ ಹೋಗ್ಬೇಕು. ಇವತ್ತು ಸಿನಿಮಾಕ್ಕೆ ಹೋಗ್ಲಿಕ್ಕಿದೆ” ಅಂದ. ಬೆಳಗ್ಗೆ ಮನೆಯಿಂದ ಹೊರಡುವಾಗಲೇ ಸಂಜೆ ಸಿನಿಮಾಕ್ಕೆ ಹೋಗಬೇಕೆಂದು ಮಾತಾಗಿತ್ತು.

“ನಾನೂ ನಿನ್ನ ಮನೆಯಾಚೆಯೇ ಬರುವವನಿದ್ದೆ. ನಿಮ್ಮ ಬಯಲಿನಲ್ಲಿರುವ ಚೆಟ್ಟುಂಬಿಯ ಅಮ್ಮಿಣಿಕುಟ್ಟಿಯ ಮನೆಗೆ ಒಂದು ಗೋಣಿ ಅಕ್ಕಿ ಹಾಕ್ಲಿಕ್ಕಿತ್ತು.” ಫಕೀರಿಚ್ಚ ಹಾಲಿನ ಕ್ಯಾನುಗಳನ್ನು ಒಂದೇ ಕಡೆ ಪೇರಿಸಿಡುತ್ತ ಹೇಳುತ್ತಿದ್ದರೆ, ಸುರೇಶ ಅವರು ಮಾತು ಮುಗಿಸುವ ಮೊದಲೇ,